ಎಂದು ಗೊತ್ತಿದೆ. ಇದರ ಬಗ್ಗೆ ಮಾನ್ಯ ಕೈಗಾರಿಕಾ ಮಂತ್ರಿಗಳ ಜೊತೆ ಚರ್ಚೆ ಮಾಡಿ ಮಾಹಿತಿಯನ್ನು ತರಿಸಿ ನಿಮಗೆ ಉತ್ತರವನ್ನು ಕೊಡುತ್ತೇನೆ.

ಐ) ಎಸ್.ಎಸ್.ಎಲ್.ಸಿ. ಬೋರ್ಡಿನಲ್ಲಿ ಉತ್ತರ ಪತ್ರಿಕೆಯ ಮೌಲ್ಯಮಾಪನ ಕಾರ್ಯ ಸರಿಯಾಗಿ ನಡೆಯದಿರುವ ಬಗ್ಗೆ.

+ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ): ಸನ್ಮಾನ್ಯ ಸಭಾಧ್ಯಕ್ಷರೆ, ಎಸ್.ಎಸ್.ಎಲ್.ಸಿ ಬೋರ್ಡಿನ ಒಂದು ನಿರ್ಲಕ್ಷ್ಯತನ ಹಾಗೂ ಎಸ್.ಎಸ್.ಎಲ್.ಸಿಯ ಉತ್ತರಪತ್ರಿಕೆಯ ಮೌಲ್ಯಮಾಪನ ಏನು ಮಾಡುತ್ತಾರೆ? ಅವರ ಬೇಜವಾಬ್ದಾರಿಯ ಒಂದು ಘಟನೆಯ ಬಗ್ಗೆ ಮಾನ್ಯ ಸಚಿವರ ಗಮನಕ್ಕೆ ತಮ್ಮ ಮುಖಾಂತರ ತರುತ್ತಿದ್ದೇನೆ. ಇವರ ಬೇಜವಾಬ್ದಾರಿ ಮತ್ತು ನಿರ್ಲಕ್ಷ್ಯತನದಿಂದ ಒಬ್ಬ ಪ್ರತಿಭಾನ್ವಿತ ವಿದ್ಯಾರ್ಥಿಯ ಜೀವನ ಇವತ್ತು ಹಾಳಾಯಿತು. ಬೆಂಗಳೂರು ಹೈಸ್ಕೂಲ್‌ನಲ್ಲಿ ಒಬ್ಬ ವಿಶಾಖ್ ಎಂಬಂತಹ ಪ್ರತಿಭಾನ್ವಿತ ವಿದ್ಯಾರ್ಥಿ. ಅವನಿಗೆ ಗಣಿತ ಪತ್ರಿಕೆಯಲ್ಲಿ ಬಂದಂತಹ ಮಾರ್ಕ್ಸ್ ವಿಚಾರ. ತಮಗೂ ಗೊತ್ತು ಮ್ಯಾಥ್‌ಮ್ಯಾಟಿಕ್ಸ್‌ನಲ್ಲಿ 100ಕ್ಕೆ 99 ಕೊಡಬಹುದು, 100ಕ್ಕೆ 100 ಅಂಕ ಬರುವಂತಹ ಪತ್ರಿಕೆ. ಉತ್ತರ ಸರಿ ಇದ್ದರೆ ಪೂರ್ತಿ ಅಂಕ ಬರಬೇಕು. ಆದರೆ ಆತನಿಗೆ 40 ಅಂಕ ಬಂತು. He was expecting more than 95. He got 40 marks only. ಈಗ ನೀವೊಂದು ಹೊಸ ಯೋಜನೆಯನ್ನು ಇಂಟ್ರಡ್ಯೂಸ್ ಮಾಡಿದ್ದೀರಿ. ನಾನು ಉತ್ತರ ಪತ್ರಿಕೆಯ ಜೆರಾಕ್ಸ್ ಅನ್ನು ತೆಗೆದುಕೊಳ್ಳಬಹುದು. ಅವನು ಜೆರಾಕ್ಸ್ ಕಾಪಿ ತೆಗೆದುಕೊಂಡ. ತೆಗೆದುಕೊಂಡು ನೋಡಿದ. ಗಾಬರಿ ಆಯಿತು. 15 ನೇ ಪ್ರಶ್ನೆ ಆದ ಮೇಲೆ ಯಾವುದೇ ಉತ್ತರಕ್ಕೆ ಅಂಕವನ್ನೆ ಕೊಟ್ಟಿಲ್ಲ. ಈ ಉತ್ತರ ಪತ್ರಿಕೆಯನ್ನು ಆತ ತೆಗೆದುಕೊಂಡು ಹೋಗಿ ಬೇರೆ ಬೇರೆ ಮೌಲ್ಯ ಮಾಪನ ಮಾಡಿದಂತಹ ಗಣಿತದ ಟೀಚರ್ಸ್‌ಗೆ ತೋರಿಸಿದಾಗ ಅವರೆಲ್ಲರದೂ ಒಮ್ಮತದ ಅಭಿಪ್ರಾಯವೆಂದರೆ ಈತನಿಗೆ ಕನಿಷ್ಟ 99 ಅಂಕ ಬರಬೇಕು ಎಂದು. ಇವನು ಎಸ್.ಎಸ್.ಎಲ್.ಸಿ ಬೋರ್ಡಿಗೆ ಹೋದ. ಎಸ್.ಎಸ್.ಎಲ್.ಸಿ ಬೋರ್ಡ್‌ನವರು ರೀ ವಾಲ್ಯುಯೇಷನ್‌ಗೆ ಹಾಕಪ್ಪ ಎಂದರು. ರೀ ವಾಲ್ಯುಯೇಷನ್ ರಿಸಲ್ಟ್ ಇದುವರೆಗೂ ಕೂಡ ಬಂದಿಲ್ಲ. ಅವನಿಗೇನೋ ತಾನು ಎಲೆಕ್ಟ್ರಾನಿಕ್ಸ್ ಇಂಜಿನಿಯರ್ ಆಗಬೇಕೆಂದು ಕನಸು ಇತ್ತು. ರಿಸಲ್ಟ್ ಬಂದಿಲ್ಲ. ಇದನ್ನು ಮತ್ತೆ ತೆಗೆದುಕೊಂಡು ಹೋಗಿ ಕೊಟ್ಟಾಗ ನಾವು ಮತ್ತೆ ಎನ್‌ಕ್ವೈರಿ ಮಾಡುತ್ತೇವೆ ಎಂದು ಹೇಳುತ್ತಾರೆ. ಈ ತರಹ ಸುಮಾರು ಐದು ಸಾವಿರ ರೀ ವಾಲ್ಯುಯೇಷನ್‌ಗೆ ಅರ್ಜಿಗಳು ಕಾದಿವೆ. ರೀಟೋಟಲಿಂಗ್ ಅರ್ಜಿಗಳು ಇದೆ. ಪ್ರಶ್ನೆ ಪತ್ರಿಕೆನ್ನು ತೋರಿಸಿ ರಿಸಲ್ಟ್‌ಗೆ ಅರ್ಜಿ ಕೊಟ್ಟಿದ್ದಾರೆ, ಅದರ ಫಲಿತಾಂಶ ಕೂಡ ಬಂದಿಲ್ಲ. ಸುಮಾರು ಐದು ಸಾವಿರ ಅರ್ಜಿಗಳು ಈ ರೀತಿ ಇದೆ. ನಾನು ತಮ್ಮ ಮುಖಾಂತರ

ಕೇಳುತ್ತೇನೆ. ಆ ಮೌಲ್ಯ ಮಾಪಕರು ಆಗಾಗ್ಗೆ ನಮ್ಮನ್ನೂ ಕೂಡ ಒಂದು ತರಹ ಬ್ಲಾಕ್‌ಮೇಲ್ ಮಾಡುತ್ತಾರೆ. ಇನ್ನೇನು ಮೌಲ್ಯಮಾಪನ ಮಾಡುವಾಗ ನಮ್ಮ ದರ ಜಾಸ್ತಿ ಮಾಡಿ ಎಂದು ಕೇಳುತ್ತಾರೆ. ಒಂದು ಪೇಪರ್‌ಗೆ 40 ಪೈಸೆ ಇದೆ 1 ರೂಪಾಯಿ ಕೊಡಿ ಎಂದು ಹೇಳುತ್ತಾರೆ. ನಾವು ಕೂಡ ಅಲ್ಲಿ ಬಂದು ಮಾತನಾಡುತ್ತೇವೆ. ಆದರೆ ಈ ರೀತಿ ಒಬ್ಬ ವಿದ್ಯಾರ್ಥಿಯ ಜೊತೆ ಸುಮಾರು ವಿದ್ಯಾರ್ಥಿಗಳ ಭವಿಷ್ಯದ ಜೊತೆ ಚೆಲ್ಲಾಟ ಆಡುವ ಎಸ್.ಎಸ್.ಎಲ್.ಸಿ.ಬೋರ್ಡ್ ಇರಬಹುದು ಅಥವಾ ಮೌಲ್ಯ ಮಾಪಕರು ಇರಬಹುದು. ಅವರ ಬಗ್ಗೆ ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ? ಈ ವಿದ್ಯಾರ್ಥಿಯ ಬಗ್ಗೆ ಏನು ಮಾಡುತ್ತೀರಿ? ಅವನಿಗೆ ಒಳ್ಳೆಯ ಕಾಲೇಜು ಸಿಗುವುದಿಲ್ಲ. ಕಾಲೇಜು ಪ್ರವೇಶ ಎಷ್ಟು ಕಷ್ಟ ಇದೆ ಎಂದು ತಮಗೇ ಗೊತ್ತು. ಒಳ್ಳೆಯ ಕಾಲೇಜಿನಲ್ಲಿ ಪ್ರವೇಶ ಸಿಗುವುದಿಲ್ಲ. ಅವನು ಜೀವನದಲ್ಲಿ ಯಾವುದೋ ಆಸೆ ಇಟ್ಟುಕೊಂಡಿದ್ದ. ನಾನು ಎಲೆಕ್ಟ್ರಾನಿಕ್ಸ್‌ನಲ್ಲಿ ದೊಡ್ಡ ಗುರಿಯಲ್ಲಿ ಹೋಗಬೇಕೆಂದು ಆಸೆ ಇಟ್ಟುಕೊಂಡಿದ್ದ. ಅದು ಸಿಗುವುದಿಲ್ಲ. ಇವತ್ತು ಯಾವುದೋ ಕಾಲೇಜಿನಲ್ಲಿ ಯಾವುದೋ ಒಂದು ಸಬ್ಜೆಕ್ಟ್ ತೆಗೆದುಕೊಳ್ಳಬೇಕು. ಈ ರೀತಿ ಒಂದು ಧಾರುಣವಾದಂತಹ ಕಥೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಮೌಲ್ಯ ಮಾಪನ ಮಾಡಿದಂತಹ ಆ ಶಿಕ್ಷಕರು ಯಾರಿದ್ದಾರೆ? ಎಸ್.ಎಸ್.ಎಲ್.ಸಿ ಬೋರ್ಡಿನ ನಿಧಾನ ಪ್ರವೃತ್ತಿ ಏನು ಇದೆ? ಇದರ ಬಗ್ಗೆ ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ದಯವಿಟ್ಟು ಉತ್ತರ ಕೊಡಬೇಕು.

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೇ, ಮೌಲ್ಯ ಮಾಪನದಲ್ಲಿ ತಪ್ಪುಗಳು ಆಗುತ್ತಿವೆ ಎಂದು ಗಮನಕ್ಕೆ ಬಂದಿದ್ದರಿಂದಲೇ ಪಿಯುಸಿ ಮಟ್ಟದಲ್ಲಿ ಜೆರಾಕ್ಸ್ ಕಾಪಿ ಕೊಡುವುದು ಮತ್ತು ಮರು ಮೌಲ್ಯ ಮಾಪನಕ್ಕೆ ಅವಕಾಶ ಮಾಡಲಾಗಿದೆ. ಇದರ ಬಗ್ಗೆ ವ್ಯಾಖ್ಯಾನ ಮಾಡಿ ಹೇಳುವುದಾದರೆ ಮರು ಮೌಲ್ಯ ಮಾಪನ ಪಿಯುಸಿಯಲ್ಲಿ ಅಥವಾ ಆನ್ಸರ್ ಶೀಟ್ ಕೊಡುವುದು ಎಲ್ಲಿಯೂ ಇರಲಿಲ್ಲ. ಮಕ್ಕಳ ಹಿತದೃಷ್ಟಿಯಲ್ಲಿ ಮತ್ತು ತಂದೆ ತಾಯಿಗಳ ಹಿತದೃಷ್ಟಿಯಲ್ಲಿ ಈ ಒಂದು ಹೊಸ ವ್ಯವಸ್ಥೆಯನ್ನು ಜಾರಿಗೆ ತಂದಿರತಕ್ಕದ್ದು. ಇದರ ಬಗ್ಗೆ ಬಹುಶಃ ನೀವೆಲ್ಲಾ ಸಂತೋಷ ಪಟ್ಟಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ಸ್ವಲ್ಪ ಹಿನ್ನೆಲೆ ಹೇಳುತ್ತೇನೆ. ಎಸ್.ಎಸ್.ಎಲ್.ಸಿ ಮಟ್ಟದಲ್ಲಿಯೂ ಸಹಿತ ಗಣಿತದ ವಿಷಯದಲ್ಲಿ ಈ ವರ್ಷ ಉತ್ತರ ಪ್ರತಿಯ ಜೆರಾಕ್ಸ್ ಕಾಪಿ ಕೊಡುವ ಹಾಗೂ ಮರು ಮೌಲ್ಯ ಮಾಪನ ಮಾಡುವ ವ್ಯವಸ್ಥೆ ಮಾಡಿದೆ. ಇದನ್ನು ಯೋಚನೆ ಮಾಡಿ ಬಹಳ ಮಕ್ಕಳಿಗೆ ಅನಾನುಕೂಲ ಆಗಿತ್ತು ಮತ್ತು ಪೋಷಕರಿಗೆ ತೊಂದರೆ ಆಗಿತ್ತು ಎಂದು ಹೇಳಿ ಈ ವರ್ಷ ಪ್ರಪ್ರಥಮವಾಗಿ ಎಸ್.ಎಸ್.ಎಲ್.ಸಿನಲ್ಲಿ ಗಣಿತದ ಮಟ್ಟಿಗೆ ಮಾತ್ರ ನಾವು ಜೆರಾಕ್ಸ್ ಕಾಪಿ ಆನ್ಸರ್‌ಶೀಟ್ ಮತ್ತು ಮರು ಮೌಲ್ಯ ಮಾಪನದ ವ್ಯವಸ್ಥೆ ಮಾಡಿದ್ದೇವೆ. ಮೌಲ್ಯ ಮಾಪನದಲ್ಲಿ ತಪ್ಪು ಮಾಡಿದ್ದಾರೆಂದು ಅವರೇನು ಹೇಳುತ್ತಿದ್ದಾರೆ, ಪಿಯುಸಿಯಲ್ಲಿ ತಪ್ಪು ಮೌಲ್ಯಮಾಪನ ಮಾಡಿದಂತಹ ಸಂದರ್ಭದಲ್ಲಿ

ಮರು ಮೌಲ್ಯಮಾಪನ ಮಾಡಿದಾಗ ಯಾರು ತಪ್ಪು ಮಾಡಿದ್ದಾರೆ, ಅವರ ಮೇಲೆ ನಾವು ಕಠಿಣವಾದಂತಹ ಶಿಕ್ಷೆಯನ್ನು ಕೊಟ್ಟಿದ್ದೇವೆ. ಹಿಂದೆ ಕೊಟ್ಟಿರತಕ್ಕದ್ದು ಇದೆ, ಇದು ಹೊಸದಾಗಿ ಈವರ್ಷ ಮಾಡಿರತಕ್ಕದ್ದು. ಅಲ್ಲಿ ಪಿಯುಸಿ ಬೋರ್ಡ್‌ನಲ್ಲಿ ಮಾಡಿದ್ದಾರೆ, ಇದು ಎಸ್.ಎಸ್.ಎಲ್.ಸಿ ಬೋರ್ಡ್‌ನಲ್ಲಿ ಮಾಡತಕ್ಕದ್ದು. ಇದನ್ನು ತಾವು ನಮ್ಮ ಗಮನಕ್ಕೆ ತಂದಿದ್ದೀರಿ. ಅದು ಯಾರು ಏನು ಎಂದು ಬಂದಾಗ ಕಠಿಣವಾದಂತಹ ಕ್ರಮ ಎಂದರೆ ಒಂದು ನಾವು ಜೆರಾಕ್ಸ್ ಕಾಪಿ ಕೊಡತಕ್ಕದ್ದನ್ನು ಇಟ್ಟುಕೊಂಡಿರುವುದು. ಜೆರಾಕ್ಸ ಕಾಪಿ ಆನ್ಸರ್ ಶೀಟ್ ಕೊಟ್ಟಾಗ ತಪ್ಪು ಆದಾಗ ಮರು ಮೌಲ್ಯ ಮಾಪನ ಮಾಡಲು ಅವರಿಗೆ ಕೊಡುತ್ತಾರೆ. ದುಡ್ಡು ಕಟ್ಟಿ ಮರು ಮೌಲ್ಯ ಮಾಪನ ಮಾಡಿ ಎಂದು ಹೇಳುತ್ತಾರೆ. ಮರು ಮೌಲ್ಯ ಮಾಪನ ಮಾಡಿದಾಗ ಯಾವುದೇ ರೀತಿಯ ವ್ಯತ್ಯಾಸಗಳು ಆದಾಗ ಕ್ರಮ ತೆಗೆದುಕೊಳ್ಳುತ್ತೇವೆ. ಟೈಮ್ ಆಗಿದೆ ಎಂದು ತಾವು ಹೇಳುವುದು ನಿಜ. ಬಹುಶಃ ನಾವು ಹೊಸದಾಗಿ ಈ ಯೋಜನೆ ಮಾಡಿದ್ದೇವೆ. ಐದಾರು ಸಾವಿರ ಅರ್ಜಿಗಳು ಬಂದಿವೆ. ಕೂಡಲೇ ಮಾಡಬೇಕಾದಾಗ ಸ್ವಲ್ಪ ತಡ ಆಗಿರಬಹುದು ಅಷ್ಟೆ. ಉದಾಸೀನ ದೃಷ್ಟಿಯಿಂದ ಅಲ್ಲ. ವ್ಯತ್ಯಾಸಗಳು ಏನಾದರೂ ಆದರೆ ಅದನ್ನು ಸರಿಪಡಿಸತಕ್ಕ ಜವಾಬ್ದಾರಿಯನ್ನು ನಾವು ವಹಿಸುತ್ತೇವೆ. ಆ ಉಪಾಧ್ಯಾಯರು ಯಾರು ತಪ್ಪು ಮಾಡಿದ್ದಾರೆ ಎಂದು ಹೇಳುತ್ತೀರಲ್ಲ, ಅವರ ಬಗ್ಗೆ ಮಾಹಿತಿ ಕೊಟ್ಟರೆ ಖಂಡಿತವಾಗಿ ಅವರ ಬಗ್ಗೆ ಕಠಿಣವಾದಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಮತ್ತು ಮಕ್ಕಳಿಗೆ ತೊಂದರೆ ಆಗದ ರೀತಿಯಲ್ಲಿ ನೋಡತಕ್ಕ ಜವಾಬ್ದಾರಿ ವಹಿಸುತ್ತೇವೆ.

ಶ್ರೀ ಎಸ್.ಸುರೇಶ್ ಕುಮಾರ್: ಆ ಉಪಾಧ್ಯಾಯರು ಯಾರು ವ್ಯಾಲ್ಯೂ ಮಾಡಿದ್ದಾರೆಂದು ನಾನಂತೂ ಹೇಳುವುದಕ್ಕೆ ಆಗುವುದಿಲ್ಲ. ನಾನು ಆ ಹುಡುಗನ ಹೆಸರು, ಶಾಲೆಯ ಹೆಸರು ಕೊಟ್ಟು ರಿಜಿಸ್ಟರ್ ನಂಬರ್ ಕೊಡುತ್ತೇನೆ. You should see from the human angle. ಆ ಬಾಲಕ ಒಂದು ವರ್ಷ ಓದಿದ್ದಾನೆ. ಇವರು ವ್ಯಾಲ್ಯುಯೇಷನ್ ಮಾಡುವವರು ಬೇಕಾದ ಹಾಗೆ ಅಂಕ ಹಾಕುವುದು. ಅದೂ ಹಿಸ್ಟರಿನೋ ಅಥವಾ ಸೋಷಿಯಲ್ ಸ್ಟಡೀಸ್ ಆಗಿದ್ದರೆ ಬೇರೆ ಪ್ರಶ್ನೆ.

ಅಧ್ಯಕ್ಷರು: ಹಿಂದೆ ಇದೇ ಸದನದಲ್ಲಿ ಫ್ರೀ ಯೂನಿವರ್ಸಿಟಿ ಪೇಪರ್‌ಗಳಿಗೆ ಸಂಬಂಧಿಸಿದಂತೆ ಇಂತಹ ಅನುಮಾನಗಳನ್ನು ವ್ಯಕ್ತಪಡಿಸಿದಾಗ ಅವತ್ತಿಗೆ ಜೆರಾಕ್ಸ್ ಕಾಪಿ ಕೊಡತಕ್ಕದ್ದು ಮರು ಮೌಲ್ಯ ಮಾಡತಕ್ಕದ್ದು ಇದ್ದಿಲ್ಲ. ಮಾನ್ಯ ಗೋವಿಂದೇಗೌಡರು ಅವರ ಅಧಿಕಾರಿಗಳನ್ನು ಕರೆಸಿ ಆ ಪೇರೆಂಟ್ಸ್ ಅನ್ನು ಕರೆಸಿ ನಮ್ಮ ಕಛೇರಿಯಲ್ಲಿ ಅವರಿಗೆ ಸ್ಕ್ರಿಪ್ಟ್ಸ್ ಎಲ್ಲಾ ತೋರಿಸಿದರು. ಎರಡು ಕೇಸ್‌ನಲ್ಲಿ ಏನೋ ವ್ಯತ್ಯಾಸ ಬಂತು. ಆಮೇಲೆ ಅವರು ಸಬ್ಸಿಕ್ವೆಂಟ್ ಆಗಿ ಡಿಸಿಷನ್ ತೆಗೆದುಕೊಂಡರು. ಈ ಜೆರಾಕ್ಸ್ ಕಾಪೀಸ್ ಕೊಡಬೇಕು, ಕೆಲವರೆಲ್ಲಾ ಈ ರೀತಿಯ ಅಲಕ್ಷ್ಯ ಮನೋಭಾವನೆಯಿಂದ ಮೌಲ್ಯ ಮಾಪನ ಮಾಡಿರುತ್ತಾರೆ ಎಂಬ ಕಾರಣವನ್ನು ನೋಡಿದ್ದಾದಮೇಲೆ ಎಸ್.ಎಸ್.ಎಲ್.ಸಿ

ಬೋರ್ಡ್‌ನವರೂ ಕೂಡ they are copying it.

12.50 ಪಿ.ಎಂ

ಹೊಸದಾಗಿ ವ್ಯವಸ್ಥೆಯನ್ನು ಇಂಟ್ರಡ್ಯೂಸ್ ಮಾಡುವುದರಿಂದ ಸಾಕಷ್ಟು ಮಟ್ಟಿಗೆ ಕಂಟ್ರೋಲ್‌ಗೆ ಬರುವುದಲ್ಲದೆ, ಇದನ್ನು ಆದಷ್ಟು ಬೇಗ ಮಾಡಿದರೆ ಮಕ್ಕಳಿಗೆ ರಿಲೀಫ್ ಕೊಟ್ಟಂತಾಗುತ್ತದೆ, ಇಲ್ಲದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಅಲ್ಲದೆ, ಕಾಲೇಜುಗಳಲ್ಲಿ ಈಗಾಗಲೇ ಅಡ್ಮಿಷನ್ ಆಗುತ್ತಿದೆಯೆಂದು ನೀವು ಹೇಳಿದಿರಿ. I think in all earnestness, this house should congratulate Mr. Govinda Gowda as he has taken good initiative and good step in this direction. Now we will appeal to him. ಬೇಗ ಇದನ್ನು ಮಾಡಿಸಿ. ಈಗ ಏನು ವ್ಯವಸ್ಥೆ ಮಾಡಿದ್ದೀರಿ, ಅದನ್ನು ಇನ್ನೂ ತೀವ್ರಗೊಳಿಸಿ ತ್ವರಿತವಾಗಿ ನ್ಯಾಯ ಸಿಗುವಂತೆ ಮಾಡಿಸಬೇಕು.

ಶೀ ಎಸ್.ಸುರೇಶ್‌ಕುಮಾರ್: ಈ ತರಹದ ನಿರ್ದಿಷ್ಟವಾದ ಪ್ರಕರಣ ನಿಮ್ಮ ಗಮನಕ್ಕೆ ಬಂದಾಗ ಅಂತಹವರನ್ನು ಮತ್ತೆ ಮೌಲ್ಯಮಾಪನ ಕೆಲಸ ಮಾಡಲು ಬಿಡಬಾರದು. ಇದು ಅಪಮೌಲ್ಯ.

ಅಧ್ಯಕ್ಷರು: ಗೋವಿಂದೇಗೌಡರೆ, ಅಂತಹ ಶಿಕ್ಷಕರಿಗೆ ಬೇರೆ ಏನಾದರೂ ಶಿಕ್ಷೆಕೊಡಿ. ಇಲ್ಲದಿದ್ದರೆ, ಒಂದು ಶಿಕ್ಷೆ ಖಾಯಂಗೊಳಿಸಿ. ಏನೆಂದರೆ, ಅಂತಹವರಿಗೆ ಪುನಃ ಮೌಲ್ಯಮಾಪನ ಕೆಲಸಕ್ಕೆ ಕಳುಹಿಸಬಾರದು.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಅಂತಹ ಶಿಕ್ಷಕರನ್ನು ಮತ್ತೆ ಮೌಲ್ಯಮಾಪನ ಕೆಲಸಕ್ಕೆ ಕಳುಹಿಸುವುದಿಲ್ಲ.

MR.SPEAKER: That is the minimum punishment. Besides that, ಬೇರೆ ಪನಿಷ್‌ಮೆಂಟನ್ನು ಸಜೆಸ್ಟ್ ಮಾಡಿ.

ಡಾ: ಎಂ.ಪಿ.ಕರ್ಕಿ: ಯಾರು ಮೌಲ್ಯಮಾಪನದಿಂದ ತೊಂದರೆಗೀಡಾಗಿದ್ದಾರೋ, ಅಂತಹವರಿಗೆ ಅಡ್ಮಿಶನ್ ಕೊಡಿಸುವಂಥ ವ್ಯವಸ್ಥೆಯನ್ನೂ ಮಾಡಿಸಬೇಕಾಗುತ್ತದೆ.

ಅಧ್ಯಕ್ಷರು: ಪ್ರಾರಂಭದಲ್ಲೇ ಮಾಡಿದ್ದಾರೆ, ಅದನ್ನು ಮುಂದೆ ಇಂಪ್ರೂವ್ ಮಾಡಿಕೊಳ್ಳಬೇಕೆಂದು ಹೇಳಿರುವುದರಿಂದ ಅವರು ಅದನ್ನು ಮಾಡುತ್ತಾರೆ.

ಡಾ: ಎಂ.ಪಿ.ಕರ್ಕಿ: ಸರ್ಕಾರ ತನ್ನ ನೀತಿಯನ್ನು ಸಡಿಲಿಸಿಕೊಂಡು ಅಂತಹವರಿಗೆ ಅಡ್ಮಿಶನ್ ಕೊಡಿಸುವಂಥ ವ್ಯವಸ್ಥೆಯಾಗಬೇಕು.

ಅಧ್ಯಕ್ಷರು: ಈಗ ಮಾನ್ಯ ಸಚಿವರು ಒಂದು ಹೆಜ್ಜೆ ಇಟ್ಟಿದ್ದಾರೆ. ದಯಮಾಡಿ ಈ ದಿಕ್ಕಿನಲ್ಲಿ ಇನ್ನೂ ಅಗತ್ಯವಿರುವ ಕೆಲಸವನ್ನು ತೆಗೆದುಕೊಂಡರೆ ಅಂತಹ ಮಕ್ಕಳು ಯಾರಿರುತ್ತಾರೋ ಅವರಿಗೆ ರಿಲೀಫ್ ಸಿಗುತ್ತದೆ.

ಶ್ರೀ ಎಸ್.ಸುರೇಶ್‌ಕುಮಾರ್: ಈಗ ಇವರು ಯಾವುದೋ ಒಂದು ಅಚಾತುರ್ಯದಿಂದ 99ಅಂಕ ಬರುವವರಿಗೆ 40ಅಂಕಗಳು ಬಂದರೂ ಕಾಲೇಜುಗಳಲ್ಲಿ ಸೀಟು ಸಿಗುತ್ತಿಲ್ಲ. ಕಾಲೇಜಿನವರು ಒಂದು ಲಾಸ್ಟ್ ಡೇಟನ್ನು ಅಡ್ಮಿಶನ್‌ಗೆ ಫಿಕ್ಸ್ ಮಾಡಿದ್ದಾರೆ. ಈಗ ಆತ ಒನ್ ಆಫ್ ದಿ ರ್ಯಾಂಕ್ ಲಿಸ್ಟ್‌ನಲ್ಲಿ ಬರಬೇಕು. ರ್ಯಾಂಕ್ ಅನ್ನುವುದಿದೆ. ಆತ ಈಗ ಕಾಲೇಜು ವಿದ್ಯಾಭ್ಯಾಸದಿಂದ ವಂಚಿತನಾಗುವುದರಿಂದ ಸರ್ಕಾರ ಸ್ವಲ್ಪ ಮುತುವರ್ಜಿ ವಹಿಸಿ ಕಾಲೇಜಿಗೆ ಸೇರಿಸಿಕೊಳ್ಳುವಂತೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ರಾಜ್ಯಾದ್ಯಂತ ಇಂತಹ ಪ್ರಕರಣಗಳು 10-15 ಬರುತ್ತವೆ. Government should use its discretion.

ಶ್ರೀ ಬಿ.ಎಸ್.ಯಡಿಯೂರಪ್ಪ: ತಾವು ಹೇಳಿದಂತೆ ಸನ್ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಗೋವಿಂದೇಗೌಡರಿಗೆ ಸದನದಲ್ಲಿರುವ ಎಲ್ಲರೂ ಕೂಡ ಒಂದಾಗಿ ಅಭಿನಂದನೆ ಸಲ್ಲಿಸುತ್ತೇವೆ. ಪರೀಕ್ಷಾ ಉತ್ತರ ಪತ್ರಿಕೆಯ ಜೆರಾಕ್ಸ್ ಪ್ರತಿಯನ್ನು ಕೊಡುವಂಥ ವ್ಯವಸ್ಥೆಯನ್ನು ತಾವು ಮಾಡಿದ್ದೀರಿ. ಮಾನ್ಯ ಸದಸ್ಯರಾದ ಸುರೇಶ್‌ಕುಮಾರ್ ಅವರು ಪ್ರಸ್ತಾಪಿಸಿದಂತೆ ಮೊದಲಿನ 8-10 ಪ್ರಶ್ನೆಗಳಿಗೆ ಬರೆದ ಉತ್ತರಗಳಿಗೆ ಅಂಕಗಳನ್ನು ಕೊಟ್ಟು ನಂತರದ ಉಳಿದ ಪ್ರಶ್ನೆಗಳ ಉತ್ತರಗಳಿಗೆ ಅಂಕಗಳನ್ನು ಕೊಡದಿರುವಂಥ ಉದಾಹರಣೆ ಏನಿದೆ, ಅಂದರೆ ಕಳೆದ ಹತ್ತಾರು ವರ್ಷಗಳಿಂದ ಶಿಕ್ಷಕರು ಯಾವ ರೀತಿ ಮೌಲ್ಯಮಾಪನ ಮಾಡುತ್ತಿದ್ದಾರೆ, ಇದರಿಂದ ಮಕ್ಕಳು ಯಾವ ಪರಿಸ್ಥಿಗೆ ಬಂದಿದ್ದಾರೆನ್ನುವುದಕ್ಕೆ ಇದೊಂದು ತಾಜಾ ಉದಾಹರಣೆ. ನಾವು ಇಂತಹ ಶಿಕ್ಷಕರುಗಳನ್ನು ಕ್ಷಮಿಸಬೇಕೇ?

ಅಧ್ಯಕ್ಷರು: ಆ ಮೌಲ್ಯಮಾಪನ ವ್ಯವಸ್ಥೆ ಸರಿ ಇಲ್ಲದಿರುವುದರಿಂದಲೇ ನಾವೆಲ್ಲರೂ ಬಹಳಷ್ಟು ಸಲ ಹೆದರುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ: ಇವೊತ್ತು ಆ ತರಹದ ಐದು ಸಾವಿರದಷ್ಟು ಕೇಸುಗಳಿವೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಲ್ಲಿ ನನ್ನ ಪ್ರಾರ್ಥನೆ ಏನೆಂದರೆ, ಆದಷ್ಟು ಬೇಗ ಮರುಮೌಲ್ಯಮಾಪನದ ವ್ಯವಸ್ಥೆ ಮಾಡಿಸಿ ಆತ ಕಾಲೇಜಿಗೆ ಅಡ್ಮಿಶನ್ ಆಗುವ ವ್ಯವಸ್ಥೆಯಾಗಬೇಕು ಮತ್ತು ಸರಿಯಾದ ಸಮಯಕ್ಕೆ ಆತನಿಗೆ ಅಂಕಪಟ್ಟಿ ಕೊಟ್ಟು ಬದುಕುವಂಥ ವ್ಯವಸ್ಥೆ ಮಾಡಿ ಪುಣ್ಯ ಕಟ್ಟಿಕೊಳ್ಳಿ.